251 (97) – ಶ್ರೀ ರಘುಪತಿ ಭಟ್ ಕೆ. (ಉಡುಪಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಕ್ಷೇತ್ರದ 80 ಬಡಗಬೆಟ್ಟು-ಅತಿವೂರು ಗ್ರಾಮಗಳಲ್ಲಿ ಸರ್ಕಾರವೇ ವಿತರಿಸಿದ 1000ಕ್ಕೂ ಅಧಿಕ ನಿವೇಶನಗಳ ಜಾಗದ ಬಗ್ಗೆ ಅರಣ್ಯ ಇಲಾಖೆಯ ತಕರಾರಿನಿಂದಾಗಿ ಬಡ ನಿವೇಶನ ರಹಿತರು ಶೋಷಣೆಗೊಳಗಾಗಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಭರವಸೆ ಏನಾದರೂ ನೀಡಿದೆಯೇ ;

ಇ) ಈ ನಿಟ್ಟಿನಲ್ಲಿ ಅರಣ್ಯ ಇಲಾಖೆಗೆ ರೂ. 1.03 ಕೋಟಿ ಪರಿಹಾರವನ್ನು ಕಂದಾಯ ಇಲಾಖೆಯಿಂದ ಪಾವತಿಸಲು ಪ್ರಸ್ತಾವನೆ ಬಂದಿದೆಯೇ ;

ಈ) ಸದರಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಿ, ಬಡ ಸಂತ್ರಸ್ಥರ ಸಮಸ್ಯೆಯನ್ನು ಪರಿಹಾರ ಮಾಡಲು ಇನ್ನೂ ಎಷ್ಟು ಸಮಯ ಸರ್ಕಾರಕ್ಕೆ ಬೇಕಾಗಿರುತ್ತದೆ (ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)–

ಅ) ಹೌದು

ಆ) ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ.

ಇ) ಅರಣ್ಯ ಜಮೀನಿನಲ್ಲಿ ಮನೆ ಕಟ್ಟಿರುವ ಫಲಾನುಭವಿಗಳಿಗೆ ಬಿಟ್ಟುಕೊಡಲು ಅರಣ್ಯ ಇಲಾಖೆಯು ಪ್ರತಿ ಹೆಕ್ಟೇರಿಗೆ ರೂ.7.50 ಲಕ್ಷ ವಾಸ್ತವಿಕ ಮೌಲ್ಯ ಮತ್ತು ನಡುತೋಪು ಬೆಳೆಸಲು ಪ್ರತಿ ಹೆಕ್ಟೇರ್‌ಗೆ ರೂ.54,000/– ಹಣ ಒಟ್ಟಾಗಿ 1.03 ಕೋಟಿ ರೂ. ಪಾವತಿಸಲು ಕೇಳಿದ್ದು ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಿದೆ.

ಈ) ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಸಹಮತಿ ನೀಡಿದ್ದು, ಒಟ್ಟಾರೆ ರೂ.1.03 ಕೋಟಿ ಮೊತ್ತವನ್ನು ಅರಣ್ಯ ಇಲಾಖೆಗೆ ಬಿಡುಗಡೆ ಮಾಡಲಾಗುತ್ತಿದೆ.

252 (807) – ಶ್ರೀ ರಘುಪತಿ ಭಟ್ ಕೆ. (ಉಡುಪಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?